# ಏಕಾಂತದ ಒಳಕೋಣೆಯಿಂದ ಲೋಕಾಂತದ ದರ್ಶನ

ಎಂ.ಎಸ್. ಆಶಾದೇವಿ

ಎಚ್.ಎಸ್. ಮುಕ್ತಾಯಕ್ಕ ಅಪ್ಪಟ ಕವಿ. ಕಾವ್ಯವು ಅವರಿಗೆ ಅಭಿವ್ಯಕ್ತಿ ಮಾರ್ಗವಲ್ಲ, ಅದು ಅವರು ನಡೆಯುತ್ತಿರುವ ಬಟ್ಟೆಯೂ ಹೌದು, ಅವರ ವ್ಯಕ್ತಿತ್ವಕ್ಕೆ ಅವರೇ ಹೊಲಿದು ಹಾಕಿಕೊಂಡಿರುವ ಬಟ್ಟೆಯೂ ಹೌದು. ಅದು ಎಲ್ಲರೂ ನಡೆದ ದಾರಿಯಲ್ಲಿ ನಡೆಯುತ್ತಿರುವ ಪಯಣವಲ್ಲ, ದರ್ಜಿಗಳು ಹೊಲಿದ ರೂಢಿಯ ಬಟ್ಟೆಯೂ ಅಲ್ಲ. ಅದು ಅವರೇ ನೇಯ್ದ, ಅವರಿಗೆ ಬೇಕಾದ ಬಣ್ಣಗಳನ್ನು, ಅವರಿಗೆ ಪ್ರಿಯವಾದ ವಿನ್ಯಾಸದಲ್ಲಿ ಅವರೇ ಹೊಲಿದುಕೊಂಡಿರುವುದು. ಲೋಕದ ಕಣ್ಣಿಗೆ ಅದು ಹೇಗೂ ಕಾಣಲಿ. ಮರುಳೆಂದು, ಸೌಂದರ್ಯವಿಲ್ಲೆಂದು, ಶಿಸ್ತಿಲ್ಲೆಂದು, ಶಾಸ್ತ್ರೀಯವಲ್ಲೆಂದು... ಏನೂ ಬೇಕಾದರೂ ಹೇಳಲಿ, ಅವರಿಗದರ ಬಿಸಾತಿಲ್ಲ. ಬದುಕು ಮತ್ತು ಕಾವ್ಯ ಎರಡೂ ತನ್ನಿಚ್ಛೆಯಲ್ಲಿರದೆ ನಿಮ್ಮಿಚ್ಛೆಯಾಗುವುದು ಅವರಿಗೆ ಸರ್ವಥಾ ಇಷ್ಟವಿಲ್ಲ. ಇದಕ್ಕಾಗಿಯೇ ಅವರು ಆರಿಸಿಕೊಂಡ ಗಜಲ್ ಪ್ರಕಾರವು ಅವರಿಗಾಗಿಯೇ ಸೃಷ್ಟಿಯಾದದ್ದೇನೋ ಎನ್ನುವಷ್ಟು ಮುಕ್ತವಾಗಿದೆ, ಅವರ ಹೆಸರಿನಂತೆ.

ಗಜಲ್ ಪ್ರಕಾರವು ಅತ್ಯಂತ ಆಕರ್ಷಕವಾದುದು ನಿಜ. ಆದರೆ, ಅದು ಎಲ್ಲರಿಗೂ ಒಲಿಯುವುದು ಸಾಧ್ಯವೇ ಇಲ್ಲ. ಆರಂಭದಿಂದ ಕೊನೆಯವರೆಗೂ ತುರೀಯಾವಸ್ಥೆಯ ಅನುರಕ್ತಿಯನ್ನು ಅದು ಬೇಡುತ್ತದೆ. ಸದಾ ಭಾವೋಲಿಪ್ತವಾದ, ಆದರೂ ಹುಸಿಯಾಗದ ಅಪರೂಪದ ಮನಃಸ್ಥಿತಿಯಿಲ್ಲದಿದ್ದರೆ ಗಜಲ್‌ಗಳನ್ನು ಬರೆಯುವುದು ಸಾಧ್ಯವಿಲ್ಲ. ಇದನ್ನು ಹೀಗೂ ಹೇಳಬಹುದು: ಚಂದ್ರೋದಯಕ್ಕೆ ಹೆಚ್ಚುವ ಅಂಬುಧಿಯಂತೆ ಬದುಕನ್ನು, ಅದರ ಪ್ರತಿಕ್ಷಣವನ್ನು, ಅದು ದುಃಖವಿರಲಿ, ಸಂತೋಷವಿರಲಿ, ಉದಾಸೀನವಿರಲಿ, ವಿಷಾದವಿರಲಿ – ಅದನ್ನು ಎದೆಮಟ್ಟ ಅನುಭವಿಸುವುದೇ ಬದುಕಿನ ದಾರಿ ಎಂದು ನಂಬಿದ ಪಂಥದವರು ಗಜಲ್‌ನವರು. ಗಜಲ್‌ಗಳ ದುರ್ಬಲ ಅನುಕರಣೆಗಳ ಬೆಟ್ಟವೇ ಭಾರತೀಯ ಸಾಹಿತ್ಯದಲ್ಲಿ ಲಭ್ಯವಿದೆ. ಕೆಲವೊಮ್ಮೆ ಗಾಯಕರ ಊರುಗೋಲಿನಿಂದಲೂ ಅವು ಪ್ರಸಿದ್ಧವಾಗಿಬಿಡುತ್ತವೆ. ಆದರೆ, ಅಪ್ಪಟ ಗಜಲ್‌ಗಳ ಮಾತೇ ಬೇರೆ. ಅವು ಭಾವ–ನಾದದ ನದಿಗಳಂತೆ, ಹರಿಯುತ್ತಲೇ ಇರುತ್ತವೆ. ಯಾವ ಊರುಗೋಲುಗಳೂ